**ಕಾರ್ಯದರ್ಶಿ ಹಾಗೂ ಖಜಾಂಚಿಗಳ ಕಛೇರಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಬೆಂಗಳೂರು-2**

ಶಿಕನಿ/ಆಡಳಿತ(1)/ಲ್ಯಾಪ್‌ಟಾಪ್(28ಡಬ್ಲ್ಯೂ)/2014-15 ದಿನಾಂಕ 27.02.2015

## ಸುತ್ತೋಲೆ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸರ್ಕಾರಿ ಶಾಲಾ ಶಿಕ್ಷಕರುಗಳಿಗೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗಳ ವತಿಯಿಂದ ಮಂಜೂರು ಮಾಡಲಾಗುವ ಲ್ಯಾಪ್‌ಟಾಪ್ / ಟ್ಯಾಬ್ಲೆಟ್ ಖರೀದಿಯ ಕುರಿತಂತೆ ನಿಬಂಧನೆಗಳನ್ನು ಹೊರಡಿಸುವ ಬಗ್ಗೆ

ಉಲ್ಲೇಖ: 1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ಇವರ ಪ್ರಸ್ತಾವನೆಯ ಆಧಾರದಲ್ಲಿ ನಿಧಿಗಳ ಅಧ್ಯಕ್ಷರು ಹಾಗೂ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಅನುಮತಿ ದಿನಾಂಕ 25.02.2015

2. ಈ ಕಛೇರಿಯ ಜ್ಞಾಪನಾ ಸಂಖ್ಯೆ ಎಫ್(1)/ಶಿಕನಿ/ಆಡಳಿತ/ಲ್ಯಾಖ/01/2012-13 ದಿನಾಂಕ 07.06.2012

---****---

**ಪ್ರಸ್ತಾವನೆ:**

ದಿನಾಂಕ 27.03.2012ರಂದು ನಡೆದ ನಿಧಿಗಳ ರಾಜ್ಯಸಮಿತಿ ಸಭೆಯಲ್ಲಿ ಕೈಗೊಳ್ಳಲಾಗಿದ್ದ ತೀರ್ಮಾನದಂತೆ ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇಚ್ಛೆಯುಳ್ಳ ಸರ್ಕಾರಿ ಶಿಕ್ಷಕರುಗಳಿಗೆ ಲ್ಯಾಪ್‌ಟಾಪ್ ಖರೀದಿಗೆ ವಿವಿಧ ನಿಬಂಧನೆಗಳನ್ನು ವಿಧಿಸಿ ರೂ.10,000/-ಗಳ ಮುಂಗಡವನ್ನು ನೀಡಲು ಆದೇಶವನ್ನು ಹೊರಡಿಸಲಾಗಿತ್ತು. ಉಲ್ಲೇಖ(1)ರಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ಇವರು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಶಿಕ್ಷಕರುಗಳಿಗೆ ಲ್ಯಾಪ್‌ಟಾಪ್ ಅಥವಾ ಟ್ಯಾಬ್ಲೆಟ್ ಖರೀದಿಸಲು ಕ್ರಮವಾಗಿ ರೂ.30,000/- ಅಥವಾ ರೂ.10,000/-ಗಳ ಮುಂಗಡ ಮಂಜೂರಾತಿಗೆ ಕ್ರಮ ತೆಗೆದುಕೊಳ್ಳಲು ಕೋರಿದ್ದು, ಈ ಕೋರಿಕೆಯಂತೆ ರೂಪಿಸಲಾದ ನಿಬಂಧನೆಗಳನ್ನು ಉಲ್ಲೇಖ(1)ರಲ್ಲಿ ನಿಧಿಗಳ ಅಧ್ಯಕ್ಷರು ಹಾಗೂ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಅನುಮೋದಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ನೂತನವಾದ ಈ ಯೋಜನೆಗೆ ಕೆಳಕಂಡ ನಿಬಂಧನೆಗಳನ್ನು ವಿಧಿಸಿ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ:**

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸರ್ಕಾರಿ ಶಾಲಾ ಶಿಕ್ಷಕರುಗಳಿಗೆ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗಳ ವತಿಯಿಂದ ಲ್ಯಾಪ್‌ಟಾಪ್ / ಟ್ಯಾಬ್ಲೆಟ್ ಖರೀದಿಯ ಕುರಿತಂತೆ ಪರಿಷ್ಕೃತ, ನೂತನ ಯೋಜನೆಯೊಂದನ್ನು ಜಾರಿ ತರಲಾಗಿದ್ದು, ಈ ಯೋಜನೆಯ ಅನುಷ್ಠಾನ ಕುರಿತಂತೆ ಕೆಳಕಂಡ ರೂಪುರೇಷೆಗಳನ್ನು ಒಳಗೊಂಡಿರುವ ನಿಬಂಧನೆಗಳನ್ನು ಈ ಮೂಲಕ ಹೊರಡಿಸಲಾಗಿದೆ.

1. ನಿಧಿಗಳ ವತಿಯಿಂದ ಒಂದು ಶೈಕ್ಷಣಿಕ ವರ್ಷದಲ್ಲಿ ಒಮ್ಮೆ ಮಾತ್ರ ಈ ಮುಂಗಡ ಹಣ ನೀಡಲಾಗುವುದು.
2. ಒಂದು ಶೈಕ್ಷಣಿಕ ವರ್ಷದಲ್ಲಿ ಮಂಜೂರು ಮಾಡಲಾಗುವ ಲ್ಯಾಪ್‌ಟಾಪ್ ಖರೀದಿಯ ಮುಂಗಡದ ವಿವರ , ಗರಿಷ್ಟ ಸಂಖ್ಯೆ ಕೆಳಕಂಡಂತಿದೆ.

| ಕ್ರಸ | ಮುಂಗಡ ಫಲಾನುಭವಿಗಳ ವಿವರ | ಲ್ಯಾಪ್‌ಟಾಪ್ | | ಟ್ಯಾಬ್ | |
|---|---|---|---|---|---|
| | | ಸಂಖ್ಯೆ | ಮುಂಗಡ ಮೊತ್ತ ರೂ.ಗಳು | ಸಂಖ್ಯೆ | ಮುಂಗಡ ಮೊತ್ತ ರೂ.ಗಳು |
| 1 | ಡಿ.ಎಸ್.ಇ.ಆರ್.ಟಿ ಹಾಗೂ ಅದರ ಅಧೀನದ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು | | ತಲಾ ರೂ.30,000 | | ತಲಾ ರೂ.10,000 |
| | ಅ) ಡಿ.ಎಸ್.ಇ.ಆರ್.ಟಿ ಕಛೇರಿಯ ಅಧಿಕಾರಿಗಳು | 05 | | 02 | |
| | ಆ) ಡಯಟ್‌ಗಳು | 05 | | 05 | |
| | ಇ) ಸಿ.ಟಿ.ಇಗಳು | 05 | | 05 | |
| 2 | ಇತರೆ ರಾಜ್ಯ/ವಿಭಾಗೀಯ/ಜಿಲ್ಲಾ/ತಾಲ್ಲೂಕು ಮಟ್ಟದ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು | 05 | | 05 | |
| 3 | ಸರ್ಕಾರಿ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು (ಪ್ರತಿ ತಾಲ್ಲೂಕಿಗೆ) | 03 | | 03 | |
| 4 | ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ï ಮುಖ್ಯೋಪಾಧ್ಯಾಯರೂ ಸೇರಿದಂತೆ (ಪ್ರತಿ ತಾಲ್ಲೂಕಿಗೆ) | 03 | | 03 | |
| 5 | ಸರ್ಕಾರಿ ಪ್ರೌಢಶಾಲಾ ಶಿಕ್ಷಕರು (ಪ್ರತಿ ತಾಲ್ಲೂಕಿಗೆ) | 03 | | 03 | |
| 6 | ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು (ಪ್ರತಿ ತಾಲ್ಲೂಕಿಗೆ) | 01 | | 01 | |

3. ಮೇಲಿನ ಕೋಷ್ಟಕದಲ್ಲಿ ತೋರಿಸಿರುವ ಕ್ರ.ಸ(1) ಹಾಗೂ (2)ರ ಮುಂಗಡ ಫಲಾನುಭವಿಗಳ ವಿವರಗಳನ್ನು, ಅವರುಗಳ ಹೆಸರು ಹಾಗೂ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯೊಂದಿಗೆ ಅಂತಿಮಗೊಳಿಸಿ, ಸೂಕ್ತ ಶಿಫಾರ್ಸಿನೊಂದಿಗೆ ನಿಧಿಗಳ ಕಛೇರಿಗೆ ಸಲ್ಲಿಸುವ ಜವಾಬ್ದಾರಿ ಡಿ.ಎಸ್.ಇ.ಆರ್.ಟಿ ನಿರ್ದೇಶಕರದ್ದಾಗಿರುತ್ತದೆ. ನಿಧಿಗಳ ಕಛೇರಿಯಿಂದ ಈ ಅಧಿಕಾರಿಗಳಿಗೆ ಸಂಬಂಧಿಸಿದಂತೆ ನೀಡಲಾಗುವ ಮುಂಗಡವನ್ನು ನಿಧಿಗಳ ಕಛೇರಿಗೆ ಸಂಬಂಧಪಟ್ಟ ಖಾತೆಗೆ (ಟಿ.ಬಿ.ಎಫ್ ಖಾತೆ ಸಂಖ್ಯೆ ï 54051197813, ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು, ಬೆಂಗಳೂರು ಮೈನ್ ಬ್ರಾಂಚ್, ಕೆ.ಜಿ.ರಸ್ತೆ, ಬೆಂಗಳೂರು) ಮಾಹೆವಾರು ಮರುಜಮೆ ಮಾಡುವುದನ್ನು ಗಮನಿಸಿ ಕಾಲಕಾಲಕ್ಕೆ ವಿವರವನ್ನು ನಿಧಿಗಳ ಕಛೇರಿಗೆ ಸಲ್ಲಿಸುವ ಜವಾಬ್ದಾರಿಯೂ ಡಿ.ಎಸ್.ಇ.ಆರ್.ಟಿ ನಿರ್ದೇಶಕರದ್ದಾಗಿರುತ್ತದೆ.

   ಡಿ.ಎಸ್.ಇ.ಆರ್.ಟಿ ನಿರ್ದೇಶಕರಿಂದ ಸೂಕ್ತ ಶಿಫಾರ್ಸಿನೊಂದಿಗೆ ಸಲ್ಲಿಸಲಾಗುವ ಪಟ್ಟಿ ಹಾಗೂ ವಿವರಗಳ ಆಧಾರದ ಮೇಲೆ, ಸಂಬಂಧಪಟ್ಟವರಿಗೆ ಹಣವನ್ನು ವಿತರಿಸಲು ನೇರವಾಗಿ ಡಿ.ಎಸ್.ಇ.ಆರ್.ಟಿಗೆ ಬಿಡುಗಡೆ ಮಾಡಲಾಗುವುದು.

4. ಉಳಿದಂತೆ, ಕ್ರ.ಸ(3) ರಿಂದ (6) ರವರೆಗೆ ಅಧಿಕಾರಿಗಳ/ಶಿಕ್ಷಕರ ಮುಂಗಡದ ಮರುಪಾವತಿಯ ಮೇಲುಸ್ತುವಾರಿ ಎಂದಿನಂತೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದಾಗಿರುತ್ತದೆ. ಈ ಮುಂಗಡವನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನೀಡಲಾಗುವುದು.
5. ಯಾವುದೇ ಅಧಿಕಾರಿ/ಶಿಕ್ಷಕರು ಸೇವೆಯಲ್ಲಿ ಒಮ್ಮೆ ಮಾತ್ರ ಈ ಮುಂಗಡ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ. ಹಾಗೂ ಲ್ಯಾಪ್‌ಟಾಪ್ ಅಥವಾ ಟ್ಯಾಬ್ ï ಎರಡರಲ್ಲಿ ಒಂದನ್ನು ಮಾತ್ರ ಖರೀದಿಗೆ ಮುಂಗಡ ಮಂಜೂರು ಮಾಡಲಾಗುವುದು.
6. ಮಂಜೂರು ಮಾಡುವ ಮುಂಗಡದ ಮರುಪಾವತಿಗೆ ಹೆಚ್ಚುವರಿ ನಿಬಂಧನೆಗಳು ಕೆಳಕಂಡಂತಿವೆ:

ಅ) ಲ್ಯಾಪ್‌ಟಾಪ್/ಟ್ಯಾಬ್ ಖರೀದಿಗೆ ನಿಧಿಗಳ ಕಛೇರಿಯಿಂದ ನೀಡುವ ಮುಂಗಡಕ್ಕಿಂತಾ ಹೆಚ್ಚುವರಿಯಾಗಿ ಬೀಳುವ ಮೊತ್ತವನ್ನು ಆಯಾ ಅಧಿಕಾರಿಗಳು ತಾವು ಇಚ್ಛಿಸಿದ ಅಂಗಡಿಯಿಂದ ಖರೀದಿಸಿ ಪಾವತಿಸಿದ ಬಿಲ್‌ನ ಮೂಲ ಪ್ರತಿಯನ್ನು ವಾರಂಟಿ ಕಾರ್ಡಿನ ದೃಢೀಕೃತ ಪ್ರತಿಯೊಂದಿಗೆ ಸಲ್ಲಿಸಬೇಕು. ನಂತರವೇ ಮುಂಗಡವನ್ನು ನೀಡಲಾಗುವುದು.

ಆ) ಹತ್ತು ಸಮಕಂತುಗಳಲ್ಲಿ ನಿಧಿಗಳ ಖಾತೆಗೆ ಮರುಪಾವತಿ ಮಾಡಬೇಕು. (ಮೇಲೆ ತಿಳಿಸಿದ ಹಾಗೆ ಟಿ.ಬಿ.ಎಫ್ ಖಾತೆ ಸಂಖ್ಯೆ ï 54051197813, ಸ್ಟೇಟ್‌ಬ್ಯಾಂಕ್ ಆಫ್ ಮೈಸೂರು, ಬೆಂಗಳೂರು ಮೈನ್ ಬ್ರಾಂಚ್, ಕೆ.ಜಿ.ರಸ್ತೆ, ಬೆಂಗಳೂರು)

ಇ) ಪ್ರತಿ ವರ್ಷದ ಮೇ 30ರ ಒಳಗೆ ಸಂಬಂಧಪಟ್ಟವರು ತಮ್ಮ ವ್ಯಾಪ್ತಿಯ ಅರ್ಹ ಶಿಕ್ಷಕರ ಪಟ್ಟಿಯನ್ನು ನಿಧಿಗಳ ಕಛೇರಿಗೆ ಸಲ್ಲಿಸತಕ್ಕದ್ದು.

ಈ) ಯಾವುದೇ ಅಧಿಕಾರಿ/ಶಿಕ್ಷಕರು ನಿಧಿಗಳ ಅಜೀವ ಸದಸ್ಯತ್ವದ ಕಾರ್ಡನ್ನು ಹೊಂದಿರುವುದು ಕಡ್ಡಾಯ. ಇಲ್ಲದಿದ್ದಲ್ಲಿ, ಮುಂಗಡ ಮಂಜೂರು ಮಾಡುವುದಿಲ್ಲ.

ಉ) ಕನಿಷ್ಠ ಐದು ವರ್ಷಗಳ ಸೇವಾವಧಿಯನ್ನು ಪೂರ್ಣಗೊಳಿಸಿರಬೇಕು. ನಿವೃತ್ತಿಗೆ ಕನಿಷ್ಠ ಮೂರು ವರ್ಷ ಇರಬೇಕು.

6. ಡಿ.ಎಸ್.ಇ.ಆರ್.ಟಿ ಹಾಗೂ ಇನ್ನಿತರೆ ಕಛೇರಿಗಳಿಂದ ನಿಧಿಗಳ ಕಛೇರಿಗೆ ಸಲ್ಲಿಸಬೇಕಾಗುವ ಕ್ರೂಢೀಕೃತ ಮಾಹಿತಿಯ ವಿವರ ಕೆಳಕಂಡಂತಿದೆ. (ಲ್ಯಾಪ್‌ಟಾಪ್ ಹಾಗೂ ಟ್ಯಾಬ್‌ಗಳ ಮುಂಗಡಕ್ಕೆ ಪ್ರತ್ಯೇಕವಾಗಿ ಸಲ್ಲಿಸಬೇಕು.

| ಕ್ರಸ | ಫಲಾನುಭವಿಯ ಹೆಸರು/ಹುದ್ದೆ | ಕಛೇರಿ | ಜನ್ಮದಿನಾಂಕ | ಸೇವೆಗೆ ಸೇರಿದ ದಿನಾಂಕ | ನಿಧಿಗಳ ಅಜೀವ ಸದಸ್ಯತ್ವ ಸಂಖ್ಯೆ | ಅರ್ಜಿ ಸಲ್ಲಿಸಿದ ದಿನಾಂಕ | ಮುಂಗಡದ ಮೊತ್ತ | ಷರಾ |
|---|---|---|---|---|---|---|---|---|

7. ಈ ಸುತ್ತೋಲೆಯೊಂದಿಗೆ ನೀಡಿರುವ ಅರ್ಜಿ ನಮೂನೆಯಲ್ಲಿಯೇ ಲ್ಯಾಪ್‌ಟಾಪ್ ಖರೀದಿಗೆ ನಿಗದಿತ ದಾಖಲೆಗಳೊಂದಿಗೆ ಅರ್ಜಿಯನ್ನು ಸಲ್ಲಿಸಬೇಕು.

(ಮೊಹಮ್ಮದ್ ಮೊಹಸಿನ್)
ಆಯುಕ್ತರು, ಸಾಶಿಇ
ಕಾರ್ಯದರ್ಶಿ/ಖಜಾಂಚಿ

ಪ್ರತಿ:

1. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ, ಬೆಂಗಳೂರು ರವರಿಗೆ
2. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರುಗಳು,
3. ರಾಜ್ಯದ ಎಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹನಿರ್ದೇಶಕರು, ಪ್ರಾಂಶುಪಾಲರು, ಸಿ.ಟಿಇ,
4. ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಡಯಟ್ ಪ್ರಾಂಶುಪಾಲರುಗಳು
5. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳುರವರಿಗೆ
6. ಈ ಕಛೇರಿಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ : ಆಯಾ ಶಾಖಾ ವಿಷಯ ನಿರ್ವಾಕರುಗಳು ಇನ್ನು ಮುಂದೆ ಈ ಯೋಜನೆಯ ಕುರಿತಂತೆ ಸ್ವೀಕರಿಸಲಾಗುವ ಅರ್ಜಿಗಳ ಇತ್ಯರ್ಥಕ್ಕೆ ಮೇಲ್ಕಂಡ ನಿಬಂಧನೆಗಳ ಆಧಾರದಲ್ಲಿ ಕ್ರಮ ವಹಿಸುವುದು. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.ರವರಿಂದ ಬರುವ ಪ್ರಸ್ತಾವನೆಯನ್ನು ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ನಿರ್ವಹಿಸುವ ವಿಷಯ ನಿರ್ವಾಹಕರು ಕ್ರಮ ವಹಿಸತಕ್ಕದ್ದು.

**ಆಯುಕ್ತರು ಕಾರ್ಯದರ್ಶಿ ಹಾಗೂ ಖಜಾಂಚಿಗಳ ಕಛೇರಿ, ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು–560009**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ / ಶಿಕ್ಷಕರಿಗೆ ಲ್ಯಾಪ್ ಟಾಪ್ / ಟ್ಯಾಬ್ ಖರೀದಿಸಲು ಶಿಕ್ಷಕರ ಕಲ್ಯಾಣ ನಿಧಿಯಿಂದ ನೀಡುವ ಮುಂಗಡದ ಅರ್ಜಿ ನಮೂನೆ**

(ಇದನ್ನು ಸಂಬಂಧಿಸಿದ ಶಾಲಾ/ಕಛೇರಿ ಮುಖ್ಯಸ್ಥರ ಮೂಲಕ ನಿಯಂತ್ರಣಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಪ್ರತಿ ದಾಖಲೆಗಳನ್ನೂ ದೃಢೀಕರಿಸಿ ಸಲ್ಲಿಸಬೇಕು)

**ಶಿಕ್ಷಕರ/ಅಧಿಕಾರಿಗಳ ದೃಢೀಕೃತ ಭಾವಚಿತ್ರ**

| | | |
|---|---|---|
| 1 | ಹೆಸರು/ಪದನಾಮ | |
| 2 | ಕಛೇರಿಯ ಹೆಸರು ಮತ್ತು ವಿಳಾಸ | |
| 3 | ಹುಟ್ಟಿದ ದಿನಾಂಕ | |
| 4 | ಸೇವೆಗೆ ಸೇರಿದ ದಿನಾಂಕ | |
| 5 | ಆಜೀವ ಸದಸ್ಯತ್ವ ಕಾರ್ಡ್ ಸಂಖ್ಯೆ | |
| 6 | ಬಯಸಿದ ಮುಂಗಡದ ಮೊತ್ತ (ಲ್ಯಾಪ್‌ಟಾಪ್‌ಗೆ ಗರಿಷ್ಟ ರೂ.30,000/– ಅಥವಾ ಟ್ಯಾಬ್ಲೆಟ್‌ಗೆ ಗರಿಷ್ಟ ರೂ.10,000/–) | |
| 7 | ಕಛೇರಿ ಮುಖ್ಯಸ್ಥರ / ಷರಾ (ಸೂಕ್ತ ಶಿಫಾರ್ಸಿನೊಂದಿಗೆ) | |

ನಾನು ____________ ರೂ ಬೆಲೆಯ ಲ್ಯಾಪ್‌ಟಾಪ್‌ನ್ನು / ಟ್ಯಾಬ್ಲೆಟ್‌ನ್ನು ಖರೀದಿಸಿದ್ದು, ಈ ಕುರಿತಂತೆ ರಶೀದಿಯ ಮೂಲ ಪ್ರತಿಯನ್ನು ಮತ್ತು ವಾರೆಂಟಿನ ದೃಢೀಕೃತ ಜೆರಾಕ್ಸ್ ಪ್ರತಿಯನ್ನು ಸಲಿಸಿರುತ್ತೇನೆ. ನನಗೆ ಮುಂಗಡ ಮಂಜೂರಾದ ಮರು ____________ ತಿಂಗಳಿಂದ ನನ್ನ ವೇತನದಿಂದ ಪ್ರತಿ ತಿಂಗಳು (ರೂ. 1000/– ರಂತೆ ಟ್ಯಾಬ್ಲೆಟ್‌ಗೆ ಅಥವಾ ರೂ.3000/–ದಂತೆ ಲ್ಯಾಪ್‌ಟಾಪ್‌ಗೆ ಸಂಬಂಧಿಸಿದಂತೆ) 10 ಸಮ ಕಂತುಗಳಲ್ಲಿ ಮುಂಗಡದ ಮೊತ್ತವನ್ನು ಕಟಾವಣೆ ಮಾಡಲು ಒಪ್ಪಿರುತ್ತೇನೆ. (ಅನ್ವಯಿಸದ್ದನ್ನು ಹೊಡೆದು ಹಾಕುವುದು)

**ಅರ್ಜಿದಾರರ ಸಹಿ**

**ನಿಯಂತ್ರಣಾಧಿಕಾರಿಗಳ ಸಹಿ ಮೊಹರಿನೊಂದಿಗೆ**